ನಾಳೆ ಪ್ರೆಸ್ ಮೀಟ್ ಇದೆ ಅಂತೀರಿ' ಎಂದು ಎಚ್ಚರಿಸಿದ್ದು ವ್ಯಂಗ್ಯವೋ ಅಥವಾ ಸಂಸಾರದ ಆತಂಕವೋ.

ಈಗ ಈ ಶೂಟಿಂಗ್ ನಡುವಿನ ಬಿಡುವಿನಲ್ಲಿ ಎರಡೂ ಲೋಕಗಳಿಂದ ವಂಚಿತನಾದವನಂತೆ ಕೂತಿರುವ ಈ ಎವರ್‌ಗ್ರೀನ್ ಶರತ್‌ಚಂದ್ರನ ನೋವು ಅದೆಂತಹದು. ಬೆಳೆಯುತ್ತಿರುವ ಟೀನೇಜ್ ಮಕ್ಕಳನ್ನು ಸಮಾಜದಿಂದ ಅಡಗಿಸಿಡುವ ಪ್ರಾರಬ್ಧದ ಈ ಹೀರೋನನ್ನು ಎಲ್ಲರೆದುರು ಪಪ್ಪಾ ಎಂದು ಕರೆದು ಸೂಕ್ಷ್ಮವಾಗಿ ಹಂಗಿಸಿ, ಕ್ಲಿಕ್ ಕ್ಲಿಕ್ ಎಂಬ ನೂರಾರು ಮೊಬೈಲ್ ಕ್ಯಾಮೆರಾಗಳಲ್ಲಿ ಒಂದು ಸೆಕೆಂಡಿನಲ್ಲಿ ಅವನನ್ನು ಬಯಲಾಗಿಸಿ ಸೇಡು ತೀರಿಸಿಕೊಳ್ಳಲೆಂದೇ ಬಂದ ವಿಲೋಮನಿಗೆ, ಇಂದು ಅಮ್ಮನ ಜನ್ಮದಿನ ಎಂಬುದನ್ನೂ ಮರೆತು ಅವಳಿಗೊಂದು ವಿಶ್ ಮಾಡದೇ ಶೂಟಿಂಗ್‌ಗೆ ಬಂದ ಈ ಅಪ್ಪನನ್ನು 'ಅಂಥದ್ದೇನಿದೆಯಪ್ಪ ಇಲ್ಲಿ?' ಎಂದು ಖುಲ್ಲಂಖುಲ್ಲಾ ತರಾಟೆಗೆ ತೆಗೆದುಕೊಳ್ಳಲೆಂದೇ ಬಂದ ವಿಲೋಮನಿಗೆ ಅಂತಃಕರಣ ಕಲಕಿದಂತಾಯ್ತು. ಹೋಗಿ ಪಪ್ಪನ ಹಣೆ ಬೆವರನ್ನೊರೆಸಬೇಕು ಅನಿಸಿತು. ಆದರೆ ಅದು ಪಪ್ಪನ ಎವರ್‌ಗ್ರೀನ್ ಸಂಘರ್ಷದ ಘನತೆಯನ್ನು ಹಾಳು ಮಾಡೀತು. ಅಷ್ಟರಲ್ಲಿ ವ್ಯಕ್ತಿಯೊಬ್ಬ ಬಳಿ ಬಂದು 'ನಮಸ್ಕಾರಾ, ಮೀಡಿಯಾನಾ? ಸರ್ ಜೊತೆ ಮಾತಾಡೋದಿದ್ರೆ ಎರಡು ಕ್ಲೋಸ್‌ಅಪ್ ಆದ ಮೇಲೆ ಸಿಗ್ತಾರೆ, ಅಲ್ಲಿ ತನಕ ಕಾಫಿ ತಗೊಳ್ಳಿ ಸರ್' ಎಂದ. ವಿಲೋಮ ಬೆಚ್ಚಿ, 'ಇಲ್ಲ ನಾನು ಅವರ ಅಭಿಮಾನಿ. ಸುಮ್ಮನೆ ನೋಡೋಕೆ ಬಂದೆ' ಎಂದದ್ದಕ್ಕೆ 'ಹೌದಾ ಹಾಗಿದ್ರೆ ಹೋಗಿ ಸೆಲ್ಫಿ ತಕೊಂಬಿಡಿ. ಕೊಡ್ತಾರೆ. ಮೊದ್ಲೆಲ್ಲಾ ತುಂಬಾ ಸ್ಟ್ರಿಕ್ಟ್ ಇದ್ರು. ಈಗ ಮೆತ್ತಗಾಗಿದಾರೆ. ಚೂರು ಡೌನಲ್ಲಿದಾರಲ್ವಾ ಹೋಗಿ' ಎಂದು ಕಣ್ಣು ಮಿಟುಕಿಸಿದ. ವಿಲೋಮ ಇನ್ನೂ ಇಲ್ಲಿದ್ದರೆ ಕಷ್ಟ ಎಂದು ಬಾಗಿಲ ಕಡೆಗೆ ಚಲಿಸಿದ. ಹೋಗುವಾಗ ಕಡೆಗಣ್ಣಿನಲ್ಲೆಂಬಂತೆ ಹೊರಳಿ ನೋಡಿದ. ಕುರ್ಚಿಯ ಮೇಲೆ ಹಾಗೇ ಕೂತಿದ್ದ ಪಪ್ಪ ಹಾಳು ಸುರಿಯುತ್ತಿರುವ ಕ್ಷೀಣ ಬೆಳಕಿನಲ್ಲಿ ವಿಸರ್ಜನೆಗೆ ಕಾದು ಕೂತ ವಿಗ್ರಹದಂತೆ ಕಂಡ. ಗೇಟಿನ ಹೊರಗೆ ಬಂದು ಬೈಕ್ ಮೇಲೆ ಕೂತ ವಿಲೋಮ ಮೊಬೈಲ್ ತೆಗೆದು, 'ಪಪ್ಪಾ, ಈವತ್ತು ಅಮ್ಮನ ಬರ್ಥ್‌ಡೇ, ಅವಳಿಗೊಂದು ಸರ್ಪ್ರೈಸ್ ಕೊಡು. ಬೇಗ ಬಾ... ಮನೇಲೇ ಕೂತು ಅವಳ ಇಷ್ಟದ 'ಕಸ್ತೂರಿ ನಿವಾಸ' ಅಥವಾ 'ಆವಾರಾ' ನೋಡೋಣ. ನಾನು ಮತ್ತು ವಿಭಾ ಸೇರಿ ಅಡಿಗೆ ಮಾಡ್ತೀವಿ. ಲವ್ ಯೂ' ಎಂದು ಮೆಸೇಜ್ ಕಳಿಸಿ, ನೇರ ನಿಂತು ಬೈಕ್‌ಗೆ ಕಿಕ್ ಕೊಟ್ಟ.

## ಜಯಂತ ಕಾಯ್ಕಿಣಿ

'ಜಯಂತತನ'ದ ಮುದ್ರೆ ಇರುವ ಕತೆ, ಕವಿತೆ, ಪ್ರಬಂಧ, ಸಿನಿಗೀತೆಗಳನ್ನು ಕನ್ನಡಕ್ಕೆ ಕೊಟ್ಟಿರುವ ಜಯಂತ ಕಾಯ್ಕಿಣಿ ಉತ್ತರ ಕನ್ನಡದ ಗೋಕರ್ಣದವರು. 'ತೆರೆದಷ್ಟೆ ಬಾಗಿಲು', 'ದಗಡೂ ಪರಬನ ಅಶ್ವಮೇಧ', 'ಅಮೃತಬಳ್ಳಿ ಕಷಾಯ', 'ಬಣ್ಣದ ಕಾಲು', 'ತೂಫಾನ್ ಮೇಲ್', 'ಚಾರ್‌ಮಿನಾರ್' ಎಂಬ ಕಥಾ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವರು ಸಿನಿಮಾಗಳಿಗೆ 450ಕ್ಕೂ ಹೆಚ್ಚು ಗೀತೆಗಳನ್ನು ಬರೆದಿದ್ದಾರೆ.